International Journal of Kannada Research
www.kannadajournal.com

ISSN: 2454–5813
IJKR 2024; 10(2): 123-125
© 2024 IJKR
www.kannadajournal.com
Received: 20-02-2024
Accepted: 26-03-2024

**ಡಾ. ಹೇಮಂತ್ ಕುಮಾರ್ ಎಸ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಮುದ್ದೇನಹಳ್ಳಿ, ಸತ್ಯಸಾಯಿ ಗ್ರಾಮ, ಚಿಕ್ಕಬಳ್ಳಾಪುರ, ಕರ್ನಾಟಕ, ಭಾರತ

Corresponding Author:
**ಡಾ. ಹೇಮಂತ್ ಕುಮಾರ್ ಎಸ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಶ್ರೀ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ, ಮುದ್ದೇನಹಳ್ಳಿ, ಸತ್ಯಸಾಯಿ ಗ್ರಾಮ, ಚಿಕ್ಕಬಳ್ಳಾಪುರ, ಕರ್ನಾಟಕ, ಭಾರತ

# ನಾ.ಕಸ್ತೂರಿಯವರ 'ಮದುವೆ' ಕೃತಿಯಲ್ಲಿನ ಮಾನವಶಾಸ್ತ್ರೀಯ ಅಂಶಗಳು

**ಡಾ. ಹೇಮಂತ್ ಕುಮಾರ್ ಎಸ್**

**ಪೀಠಿಕೆ**

ನಾ. ಕಸ್ತೂರಿಯವರು 1940ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪ್ರಚಾರ ಪುಸ್ತಕ ಮಾಲೆಯ ಅಡಿಯಲ್ಲಿ 'ಮದುವೆ' ಎಂಬ ಮಾನವಶಾಸ್ತ್ರಕ್ಕೆ ಸಂಬಂಧಿಸಿದಂತಹ ಕಿರು ಪುಸ್ತಕವನ್ನು ಪ್ರಕಟಿಸಿದ್ದಾರೆ. ಮದುವೆ ಮಾನವ ಜೀವನದ ಒಂದು ಮುಖ್ಯ ಸಂಸ್ಕಾರ; ಕುಟುಂಬದ ಮೂಲಸ್ತಂಭ. ಆದರೂ ಮದುವೆಯ ಪದ್ಧತಿಗಳು ಕುಟುಂಬದ ವ್ಯವಸ್ಥೆಯೂ ಈಗಿರುವಂತೆಯೇ ಯಾವಾಗಲೂ ಇದ್ದವು ಎಂದು ಹೇಳಲಗುವುದಿಲ್ಲ. ಮಾನವನ ಆಶೆಗಳೂ ಆಶಯಗಳು ಮಾರ್ಪಾಡಾದಾಗ ಅವನ ಆಚಾರ ವ್ಯವಹಾರಗಳೂ ಬದಲಾವಣೆ ಹೊಂದುತ್ತವೆ. ಕಸ್ತೂರಿಯವರು ಈ ಬದಲಾವಣೆಯ ಕುರಿತಾಗಿ "ವಿವೇಚನಾಪರರ ಉಪದೇಶದಿಂದಲೂ ಇತರ ಸಂಸ್ಕೃತಿಗಳ ಸಂಪರ್ಕದಿಂದಲೂ ಬದುಕಿಗೆ ಹೊಸ ಬೆಳಕು ಬಿದ್ದಾಗ, ಜನಾಂಗದ ಗೊತ್ತುಗುರಿಗಳು ಸಮಾಜದ ಕಟ್ಟುನಿಟ್ಟುಗಳು ಸಂಸ್ಥೆಗಳ ರಚನೆ ಇವುಗಳಲ್ಲಿ–ವ್ಯತ್ಯಾಸಗಳಾಗುತ್ತವೆ."[1]

ಮನುಷ್ಯನು ಪ್ರಾಣಿಪಕ್ಷಿಗಳಿಗಿಂತ ಮೇಲುಮಟ್ಟದ ಬುದ್ಧಿಶಕ್ತಿಯಿಂದ ಸಂತಾನೋತ್ಪತ್ತಿಯನ್ನು ಮತ್ತು ಪಾಲನೆ ಪೋಷಣೆಯನ್ನು ಮಾಡುತ್ತಾನೆ. ಮಾನವ ಜಾತಿಯಲ್ಲಿ ಸ್ತ್ರೀಪುರುಷರು ಅರಿತು ಒಬ್ಬರು ಮತ್ತೊಬ್ಬರು ಕೊರತೆಯನ್ನು ನಿವಾರಿಸುತ್ತಾರೆ. ಮಾನವನ ಹುಟ್ಟುಗುಣಗಳಲ್ಲಿ ಕಾಮವು ಪ್ರಬಲವಾದುದು. ಸಮಾಜಕ್ಕೆ ಚ್ಯುತಿ ಬಾರದಂತೆಯೂ, ಅದರ ಒಟ್ಟು ಹಿತಕ್ಕೆ ತೊಂದರೆಯಾಗದಂತೆಯೂ ಅದನ್ನು ತಿದ್ದಲು ಮೊದಲಿನಿಂದಲೂ ಆಯಾ ಸಮಾಜದ ಹಿರಿಯರು ಪ್ರಯತ್ನಿಸುತ್ತಾ ಬಂದಿದ್ದಾರೆ. ಧರ್ಮ ನ್ಯಾಯ ಸದಾಚಾರ ನೀತಿ ಸನಾತನ ಪದ್ಧತಿ ಎಂಬ ಕಟ್ಟುಗಳಿಂದ ಸ್ತ್ರೀ ಪುರುಷರ ಕಾಮಜೀವನವನ್ನು ತಿದ್ದಿ ಸಮಾಜದ ಶಾಂತಿಯನ್ನೂ ಏಳಿಗೆಯನ್ನೂ ಸಾಧಿಸುತ್ತಿರುವರು. ಗಂಡ–ಹೆಂಡತಿಯರಾಗಿ ಸಂಸಾರ ಮಾಡಲು 'ಧರ್ಮ'ದ ಚೌಕಟ್ಟಿನಲ್ಲಿ ಸಮಾಜದ ಒಪ್ಪಿಗೆಯನ್ನು ಪಡೆದುಕೊಳ್ಳುತ್ತಾರೆ. ಆ ಬಂಧವನ್ನೇ 'ಮದುವೆ' ಎಂದು ಕರೆಯಬಹುದು. ಇಂತಹ ಕಟ್ಟುಪಾಡುಗಳು ಕಾಡುಜನರಲ್ಲಿ ಮತ್ತು ಹಲವು ಬುಡಕಟ್ಟುಗಳಲ್ಲಿಯೂ ಕಂಡುಬರುತ್ತದೆ. ತೊದವ ಬುಡಕಟ್ಟು ಜನರಲ್ಲಿ ಮದುವೆಗೆ ಮುಂಚೆ ಗಂಡು ಹೆಣ್ಣುಗಳ ನಡುವೆ ಹೆಚ್ಚು ಸಲಿಗೆ ಕೊಡುತ್ತಾರೆ. ಆದರೆ ಮದುವೆಯ ನಂತರ ತಪ್ಪಿ ನಡೆದರೆ ತಕ್ಕ ಶಿಕ್ಷೆ ಕೊಡುತ್ತಾರೆ. ಎಂಬ ಮದುವೆಯ ಧರ್ಮ ವಿಚಾರಗಳನ್ನು ಕಸ್ತೂರಿ ವಿವರಿಸಿದ್ದಾರೆ.

ಸಂತಾನಲಾಭವೇ ದಾಂಪತ್ಯದ ಮುಖ್ಯ ಉದ್ದೇಶವಾದ್ದರಿಂದ ಮಕ್ಕಳನ್ನು ಹಡೆದಿರುವವರು ವಿವಾಹಕ್ಕೆ ಮತ್ತಷ್ಟು ಯೋಗ್ಯರೆಂದು ಪ್ರಾಚೀನ ಜನರು ಮುಂದೆ ಬರುತ್ತಿದ್ದರಂತೆ. ಬಂಜೆತನದ ಭಯವಿಲ್ಲದವರನ್ನೇ ಆ ಜನರು ಹೆಚ್ಚು ಪ್ರೀತಿಯಿಂದ ಮದುವೆ ಮಾಡಿಕೊಳ್ಳುವರು. ಕೆಲವು ಬುಡಕಟ್ಟು ಜನಾಂಗದಲ್ಲಿ ಮನೆಗೆ ಬರುವ ಅತಿಥಿಗಳಿಗೆ ಇತರ ಉಪಚಾರಗಳೊಂದಿಗೆ ತಮ್ಮ ಸ್ತ್ರೀಯರನ್ನೂ ಅವರಿಗೆ ನೀಡುವಂತಹ ಸಂಪ್ರದಾಯ ಕೆಲವೊಂದು ಕಡೆ ಇದ್ದು. ಇದನ್ನು ಗಮನಿಸಿ ನೋಡಿ ಇವರಲ್ಲಿ ಮದುವೆಯೇ ಇಲ್ಲ; ಇವರು ಶೀಲವಂತರೇ ಅಲ್ಲ ಎಂದು ನಾವು ಹೇಳುವ ಹಾಗಿಲ್ಲ ಎಂದು ಕಸ್ತೂರಿಯವರು ಅಭಿಪ್ರಾಯಪಡುತ್ತಾರೆ.

ಮದುವೆಯಾದ ಗಂಡಹೆಂಡಿರು ಒಟ್ಟಿಗೆ ಸಂಸಾರ ಮಾಡುವುದರಿಂದ ಆಗುವ ದೊಡ್ಡ ಪ್ರಯೋಜನಗಳ ಕುರಿತು ಪ್ರಾಚೀನರಲ್ಲಿ ಅರಿವು ಮೂಡಿತ್ತು. ಒಬ್ಬರ ಸ್ನೇಹ ಇನ್ನೊಬ್ಬರಿಗೆ ಅಗತ್ಯ; ಒಬ್ಬರ ಸಹವಾಸದಿಂದ ಇನ್ನೊಬ್ಬರಿಗೆ ಆನಂದ, ಆಹಾರ ಸಂಪಾದನೆಗಾಗಿ ಮತ್ತು ದೇಹ ಸಂರಕ್ಷಣೆಗಳಿಗೂ ಪರಸ್ಪರ ಸಹಕಾರವು ಅವಶ್ಯವೆನಿಸಿತು. ಕಸ್ತೂರಿಯವರು ಪ್ರಾಚೀನ ಅನಾಗರೀಕತೆ ಕುರಿತು ಈ ರೀತಿ ಹೇಳುತ್ತಾರೆ. "ಅನಾಗರಿಕ

ಸಮಾಜದಲ್ಲಿ ಪ್ರಜಾ ಸಂಖ್ಯೆಯನ್ನಿಳಿಸಲು ಸಾಮಾನ್ಯವಾಗಿ ಹೆಣ್ಣು ಕೂಸುಗಳನ್ನು ಕೊಲ್ಲುವುದೇ ಸಂಪ್ರದಾಯ. ಈ ಸಂಪ್ರದಾಯದಿಂದ ಅನೇಕ ದೇಶಗಳಲ್ಲಿ ಒಬ್ಬ ಹೆಂಗಸನ್ನು ಅನೇಕರು ಮದುವೆ ಮಾಡಿಕೊಳ್ಳಬೇಕಾದ ಸನ್ನಿವೇಶವೂ ಒದಗಿತು. ಅಲ್ಲದೆ, ಒಂದು ಮಗುವು ಬೆಳೆಯುವುದರೊಳಗೆ ಇನ್ನೊಂದನ್ನು ಸಾಕುವ ಭಾರವೂ ಬಂದೊದಗಿದರೆ ತಾಯಿಗೂ ಮಗುವಿಗೂ ಅದರಿಂದ ಕೆಡುಕಾಗುವುದೆಂದು ಪ್ರಾಚೀನರು ತಿಳಿದಿದ್ದರು. ಇದನ್ನು ತಡೆಯಲು ಬೇಕಾದ ಅಂತರವನ್ನು ಬಲಾತ್ಕಾರದಿಂದಲಾರದರು ಒದಗಿಸಲು ಅವರು ಕೆಲವು ಕ್ರೂರ ಪದ್ಧತಿಗಳನ್ನು 'ಧರ್ಮ'ವೆಂದೇ ಆಚರಿಸುತ್ತಿದ್ದರು. ಹಿಂದಿನ ಮಗುವಿಗೆ ಎದೆ ಹಾಲನ್ನು ಬಿಡಿಸುವ ಮೊದಲೇ ಅಥವಾ ಅದು ಇನ್ನೂ ಸರಿಯಾಗಿ ಓಡಾಡಲು ಕಲಿಯುವ ಮುನ್ನವೇ ಹುಟ್ಟುವ ಕೂಸನ್ನು ಅವರು ಕಲ್ಲೆದೆಯಿಂದ ಕೊಂದುಬಿಡುವರು."[2]

ಯಾರು ಯಾರನ್ನು ಮದುವೆಯಾಗಬಹುದು ಎಂದು ವಿಚಾರಣೆ ಮಾಡಿದಾಗ, ಈ ವಿಷಯವಾಗಿ ಅನೇಕ ಕಟ್ಟುಪಾಡುಗಳು ಇರುವುದನ್ನು ಕಸ್ತೂರಿಯವರು ವಿವರಿಸುತ್ತಾರೆ. ನಾಗರೀಕತೆಯಲ್ಲಿ ಬಹುದೂರ ಮುಂದುವರಿದಿದ್ದ ಪ್ರಾಚೀನ ಈಜಿಪ್ಟ್ ದೇಶದಲ್ಲೂ ದಕ್ಷಿಣ ಅಮೇರಿಕಾದ ಜನರಲ್ಲೂ, ಮೆಡಗಾಸ್ಕರ್ ದ್ವೀಪದಲ್ಲಿ ಹಾಗೂ ಪೂರ್ವ ಇಂಡಿಯಾ ದ್ವೀಪಸ್ತೋಮದ ನಿವಾಸಿಗಳಲ್ಲಿ ಅಣ್ಣ–ತಂಗಿಯನ್ನು ಮದುವೆಯಾಗುವಂತಹ ಆಚರಣೆಗಳೂ ಇದ್ದವು ಕಾರಣವೆಂದರೆ, ರಾಜನಾಗಲು ಉತ್ತಮ ಕುಲದಲ್ಲಿ ಜನ್ಮಿಸಿದ ಸ್ವಂತ ತಂಗಿಗಿಂತ ಉತ್ತಮಳಾದ ಕನ್ಯೆ ಬೇರೆಲ್ಲಿಯೂ ದೊರೆಯುವುದಿಲ್ಲವೆಂಬುದು ಅವರ ನಂಬಿಕೆ. ಆ ರಕ್ತದ ಪವಿತ್ರತೆಗಾಗಿಯೇ ಇಂತಹ ವಿವಾಹಗಳು ರಾಜಮನೆತನಗಳಲ್ಲಿ 'ಧರ್ಮ'ವೆಂದೆನಿಸಿತು. ಆದರೆ ನೀಗ್ರೋ ಜನಾಂಗದ ಕೆಲವು ಬುಡಕಟ್ಟುಗಳಲ್ಲಿ ರಕ್ತಸಂಬಂಧದಲ್ಲಿ ಯಾವುದೇ ಕಾರಣಕ್ಕೂ ಮದುವೆಯಾಗುವುದಿಲ್ಲ.

ಮದುವೆಯಾಗಲು ವರದಕ್ಷಿಣೆ ಮತ್ತು ವಧುದಕ್ಷಿಣೆ ಎರಡೂ ತೆರ ಪದ್ಧತಿಗಳು ಹಲವು ದೇಶದಲ್ಲಿ ಇಂದಿಗೂ ಚಾಲ್ತಿಯಲ್ಲಿವೆ. ಬಹು ಹಿಂದೆ ರಾಕ್ಷಸ ವಿವಾಹ ಅಥವಾ ಕನ್ಯಾಪಹರಣವೇ ಸಾಮಾನ್ಯವಾದ ಮದುವೆಯ ರೀತಿ ಎಂದು ಅನೇಕ ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ಕನ್ಯಾಶುಲ್ಕ ತೆತ್ತು ಹೆಣ್ಣು ತರುವುದೇ ಬಹಳ ಹಿಂದಿನ ಕಾಲದಿಂದಲೂ ಎಲ್ಲಾ ಜನಾಂಗಗಳ ವಾಡಿಕೆ. ತೆರ ಒಂದೊಂದು ಜನಾಂಗದಲ್ಲಿ ಒಂದೊಂದು ವಿಧವಾಗಿರುತ್ತದೆ. ಕೆಲವು ಸಮಾಜಗಳಲ್ಲಿ ಹೊಗೆಸೊಪ್ಪು, ಜೇನುತುಪ್ಪ, ದಂತ, ಕುದುರೆ, ದೋಣಿ, ಧಾನ್ಯ, ವಸ್ತ್ರ ಮುಂತಾದವು ಅಳಿಯನು ತೆರವಾಗಿ ಕೊಡಬೇಕಾದ ಪದಾರ್ಥಗಳು. ಇವುಗಳನ್ನು ಅವನೇ ಸ್ವತಹ ಸಂಗ್ರಹಿಸಿರಬೇಕೆಂಬ ನಿಯಮವು ಸಾಮಾನ್ಯವಾಗಿ ನಡವಳಿಕೆಯಲ್ಲಿದೆ. ಇದರಿಂದ, ಮುಂದೆ ಅವನು ಸುಸೂತ್ರವಾಗಿ ಸಂಸಾರವನ್ನು ನಿರ್ವಹಿಸಬಲ್ಲನೇ ಎಂಬುದೂ ತಿಳಿದ ಹಾಗಾಗುತ್ತದೆ. ಸೈಬೀರಿಯಾದಲ್ಲಿ ಮತ್ತೊಬ್ಬನ ಕೈಕಾಯದೆ ಅಳಿಯನೇ ಒಂಟಿಯಾಗಿ ತನ್ನ ಮುಂದಿನ ಸಂಸಾರಕ್ಕೆ ಬೇಕಾಗುವ ಒಂದು ಮನೆಯನ್ನು ಕಟ್ಟಿ, ಮಾವನವರಿಗೆ ವರದಿ ಒಪ್ಪಿಸಬೇಕಾಗಿತ್ತಂತೆ. ಮುಂದೆ ಕನ್ಯಾಶುಲ್ಕ ಹೋಗಿ ವರದಕ್ಷಿಣೆ ಅಧಿಕವಾಯಿತೆಂದು ಕಸ್ತೂರಿ ವಿವರಿಸುತ್ತಾರೆ.

ಮದುವೆಯ ಶಾಸ್ತ್ರಗಳನ್ನು ಗಮನಿಸಿದಾಗ, ಕಸ್ತೂರಿಯವರು ಅದಕ್ಕೆ ಸಂಬಂಧಪಟ್ಟಂತೆ ಅನೇಕ ಆಚರಣೆಗಳನ್ನೂ ನೀಡಿದ್ದಾರೆ. ಹಾಲಿರುವ ಮರದ ಕಂಬಗಳನ್ನೇ ಮದುವೆ ಚಪ್ಪರಕ್ಕೆ ಉಪಯೋಗಿಸುತ್ತಾರೆ. ಧಾನ್ಯ ತೆನೆ ತೂಗು ಹಾಕುತ್ತಾರೆ. ಚೀನಾದೇಶದಲ್ಲಿ ಮದುವೆ ಮಂಟಪದ ಮೇಲುಭಾಗದಲ್ಲಿ "ನೂರು ಗಂಡುಮಕ್ಕಳಾಗಲಿ", "ಸಾವಿರ ಮೊಮ್ಮಕ್ಕಳಾಗಲಿ"[3] ಎಂಬ ಆಶೀರ್ವಚನಗಳನ್ನು ಕಾಗದದಲ್ಲಿ ಬರೆದು ಹಾರಾಡಿಸುತ್ತಾರೆ. ಆರೋಗ್ಯ ದೃಢಕಾಯನಾದ ಮಗನು ಜನಿಸಲಿ ಎಂದು ಕೆಲವರು ಒಂದು ಗುಂಡು ಕಲ್ಲನ್ನೇ ಎತ್ತಿ ತಂದು ಅವರ ನಡುವೆ ಇಡುವರು! ರಷ್ಯಾದೇಶದಲ್ಲಿ ವಧೂವರರು ಮಂಡಿಸಬೇಕಾದ ಹೊಸ ಮಂದಲಿಗೆ ಉದ್ದಕ್ಕೂ ಅವರು ಕೂರುವುದಕ್ಕೆ ಮೊದಲೇ ಒಂದು ಗಂಡು ಮಗುವನ್ನು ಉರುಳಿಸುವರು. ಪುರುಷ ಪ್ರಧಾನವಾದ ಮಾನವ ಸಮಾಜಗಳಲ್ಲಿ ವಿವಾಹದಿಂದ ತನಗೆ ದೊರೆತ ಹೊಸ ಅಧಿಕಾರವನ್ನು ವರನು ಸೂಚಿಸಲು ಹಲಕೆಲವು ಶಾಸ್ತ್ರಗಳೂ ಸೇರಿಕೊಂಡಿವೆ. ರಷ್ಯಾ ದೇಶದ ಗ್ರಾಮಗಳಲ್ಲಿ ವಾಸಿಸುವ ಜನರು ಮದುವೆಯ ದಿನ ವರನ ಕೈಗೆ ಒಂದು ಚಮ್ಮಟಿಗೆಯನ್ನು ಕೊಟ್ಟು, ವಧುವನ್ನು ಹೊಡೆಸುವರು. ಕಾಡುಜನರು ವಧುವನ್ನು ಮುಂದಲೆ ಹಿಡಿದೆಳೆದುಕೊಂಡು ಹೋಗುತ್ತಾರೆ. ಹಿಂದೂಗಳಲ್ಲಿ ಕೈ ಕೈ ಹಿಡಿದುಕೊಂಡು ಅಗ್ನಿಯನ್ನು ಸುತ್ತುವುದು, ಇಬ್ಬರ ಸೆರಗನ್ನೂ ಸೇರಿಸಿ ಗಂಟು ಹಾಕುವುದು ಹೀಗೆ ಪ್ರಪಂಚದ ಹಲವು ಕಡೆ ಹಲವು ರೀತಿಯ ಮದುವೆ ಶಾಸ್ತ್ರಗಳನ್ನು ಕುರಿತಾಗಿ ಕಸ್ತೂರಿಯವರು ವಿವರಿಸುತ್ತಾರೆ.

ಕುಟುಂಬ ವ್ಯವಸ್ಥೆಯನ್ನು ಗಮನಿಸಿದಾಗ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಬಹುತೇಕ ಕಡೆ ಇದ್ದು ಕೆಲವು ಕಡೆ ಇಂದಿಗೂ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇದೆ. ಈ ಕುಟುಂಬಗಳಲ್ಲಿ ಗಂಡನು ಹೆಂಡತಿಯ ಮನೆಯಲ್ಲಿ ವಾಸಮಾಡಬೇಕು. ಅವರ ಸಂತಾನ ಹೆಣ್ಣಿನ ಕುಟುಂಬದಿಂದ ಗುರುತಿಸಲ್ಪಡುತ್ತಿತ್ತು. ಅಮೆರಿಕಾದ ಇರಾಕಾಯ್ ಬುಡಕಟ್ಟು ಜನಾಂಗ ತಮ್ಮ ವಂಶವನ್ನು ನಿರ್ದೇಶಿಸುವಾಗ ತಾಯಿಯ ವಂಶವನ್ನು ಹೇಳುತ್ತಿದ್ದರು. ಎಲ್ಲಾ ಆಸ್ತಿಪಾಸ್ತಿ ಹೆಣ್ಣುಮಕ್ಕಳಿಗೆ ಸೇರುತ್ತಿತ್ತು. ನಮ್ಮ ದೇಶದಲ್ಲಿ ಅಸ್ಸಾಂ ಪ್ರಾಂತ್ಯದ ಖಾಸಿ ಜನರಲ್ಲೂ, ಕೇರಳ ಪ್ರಾಂತ್ಯದ ಮಲೆಯಾಳಿಗಳಲ್ಲೂ ವಾಡಿಕೆಯಲ್ಲಿದೆ. ಕೇರಳದಲ್ಲಿ ಈ ಸಂಪ್ರದಾಯಕ್ಕೆ 'ಮರುಮಕ್ಕತ್ತಾಯ'ವೆಂದು ಹೆಸರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಇದಕ್ಕೆ 'ಅಳಿಯ ಸಂತಾನ' ವೆನ್ನುತ್ತಾರೆ. ಆದರೆ ಇತ್ತೀಚೆಗೆ ಮಾತೃಪ್ರಧಾನ ಕುಟುಂಬಗಳು ಪಿತೃಪ್ರಧಾನ ಕುಟುಂಬಗಳಾಗಿ ಮಾರ್ಪಾಡಾಗುತ್ತಿವೆ ಎಂಬ ಬದಲಾವಣೆಯ ಸ್ಥಿತ್ಯಂತರವನ್ನು ಕಸ್ತೂರಿಯವರು ತಿಳಿಸಿದ್ದಾರೆ.

ಪ್ರಪಂಚದಲ್ಲಿ ಪ್ರಾಚೀನ ಕಾಲದಿಂದಲೂ ಏಕಪತ್ನಿ ಏಕಪತಿ ಎಂಬ ಕ್ರಮವೇ ಸರಿಯಾದ ಮಾನವನ ದಾಂಪತ್ಯ ಪದ್ಧತಿಯಾಗಿತ್ತು. ಕೆಲವು ಕಡೆ ಬಹುಪತ್ನಿ ಕುಟುಮಬ ವ್ಯವಸ್ಥೆ ಇದ್ದು ಅನೇಕರನ್ನು ಮದುವೆಯಾಗುತ್ತಾರೆ. ಆದರೆ ಇದರಿಂದ ಸಮಾಜದಲ್ಲಿ ಅವಿವಾಹಿತರ ಸಂಖ್ಯೆ ಜಾಸ್ತಿಯಾಗುತ್ತದೆ. ಕೆಲವು ಶ್ರೀಮಂತರು, ರಾಜರು, ಸ್ತ್ರೀಯನ್ನು ಭೋಗದ ವಸ್ತುವಾಗಿ ಅಂತಃಪುರ ಸೇರಿಸಿ ಇತರರಿಗೆ ಸಿಗದಂತೆ ಮಾಡುತ್ತಾರೆ. ಕಾಂಗೋ ನದಿ ತೀರದ ಜನರಲ್ಲಿ ಒಬ್ಬಳೇ ಹೆಂಡತಿ ಇರುವುದೆಂದರೆ ಅದು ಬಡತನದ ಹೆಗ್ಗುರುತು. ಮೆಲಾನೀಸಿಯಾ ದ್ವೀಪಗಳಲ್ಲಿ ಬಹು ಪತ್ನೀ ವಿವಾಹವು ಹಿರಿಯರ ಮತ್ತು ಶೂರರ ಹಕ್ಕು; ಅವರ ಸಾಮರ್ಥ್ಯ ಮತ್ತು ಸಂಪತ್ತುಗಳಿಗೆ ದೊರೆಯಬೇಕಾದ ಸನ್ಮಾನ. ಪ್ರಪಂಚದಲ್ಲಿ ಬಹುಪತಿ ಕುಟುಂಬ ವ್ಯವಸ್ಥೆಯೂ ವಿರಳವಾದರೂ ಕೆಲವು ಕಡೆ ಇಂದಿಗೂ ಪ್ರಸ್ತುತ ಇದೆ. ಭೂಗುಣವೂ ವಾಯುಗುಣವೂ ಪ್ರತಿಕೂಲವಾಗಿದ್ದು, ಆಹಾರ ಪದಾರ್ಥಗಳನ್ನು ಬೆಳೆಸಲು ಕಷ್ಟವಾದರೆ, ಜನಸಂಖ್ಯೆಯನ್ನು ಇಳಿಸುವುದಕ್ಕಾಗಿ ಈ ಪದ್ಧತಿಯನ್ನು ಅನುಮೋದಿಸುತ್ತಾರೆ. ಉತ್ತರ ಶೀತವಲಯದಲ್ಲಿ ವಾಸಿಸುವ ಎಸ್ಕಿಮೋ ಜನರೂ, ಚಳಿಗಾಳಿ ಮಳೆಗಳ ಹೊಡೆತಕ್ಕೆ ಸಿಕ್ಕಿ ನರಳುವ ಟಿಬೇಟ್ ಪ್ರಸ್ಥಭೂಮಿ ಜನರೂ ಹಿಂದೂಸ್ಥಾನದ ಪರ್ವತ ಶ್ರೇಣಿಗಳಲ್ಲಿ ಕಷ್ಟದಿಂದ ಜೀವಿಸುವ ಅನೇಕ ಬುಡಕಟ್ಟಿನವರೂ, ಬಹುಪತಿಯ ಕುಟುಂಬವನ್ನು ಇಂದಿಗೂ ಧರ್ಮವೆಂದು ನಂಬುವರು. ನೀಲಗಿರಿಯ ತೊದವರಲ್ಲಿ ಬಹುಪತಿತ್ವ ಇದೆ. ಇಂದಿಗೆ ಅದು ಬದಲಾವಣೆಗೆ ಒಳಪಡುತ್ತಿವೆ. ಉದಾಹರಣೆಗೆ

ತೊದವರು ಹೆಣ್ಣುಮಕ್ಕಳನ್ನು ಕೊಲ್ಲುತ್ತಿದ್ದರು. ಸರ್ಕಾರ ಹೆಣ್ಣು ಶಿಶುಹತ್ಯೆಯನ್ನು ಸರ್ಕಾರ ನಿಷೇದಿಸಿದ ನಂತರ ತೊದವರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಹೆಚ್ಚಳವಾಗಿ ಬಹುಪತಿ ಕುಟುಂಬ ವ್ಯವಸ್ಥೆ ಕಡಿಮೆಯಾಗಿದೆ. ಎಸ್ಕಿಮೋ ಜನರಲ್ಲಿ ಒಂದು ಕುಟುಂಬದಲ್ಲಿ ನಾಲ್ಕಾರು ಜನರು ಸೇರಿ ಒಬ್ಬಳೇ ಹೆಣ್ಣನ್ನು ಮದುವೆಯಾಗುತ್ತಾರೆ. ಹಿರಿಯಣ್ಣನ ಪತ್ನಿಯೇ ಎಲ್ಲರಿಗೂ ಪತ್ನಿ. ಹೀಗೆ ಬಹುಪತ್ನಿ ಮತ್ತು ಬಹುಪತಿ ಕುಟುಂಬ ವ್ಯವಸ್ಥೆಯ ಬಗ್ಗೆ ಕಸ್ತೂರಿಯವರು ಉದಾಹರಣೆ ಸಹಿತವಾಗಿ ತಿಳಿಸಿದ್ದಾರೆ.

ಮದುವೆಯಾದವರು ಎಲ್ಲರೂ ಕೊನೆಯವರೆಗೂ ಒಟ್ಟಾಗಿ ಬಾಳುತ್ತಾರೆಂದು ಹೇಳಲೂ ಸಾಧ್ಯವಿಲ್ಲ. ಕೆಲವು ಪ್ರಬಲವಾದ ಕಾರಣಗಳಿದ್ದಾಗ ಪ್ರಾಚೀನ ಜನರು 'ಬಿಡುವಳಿಗೆ' ಅವಕಾಶ ಕೊಡುತ್ತಿದ್ದರು. ಮದುವೆಯ ಮುಖ್ಯ ಉದ್ದೇಶಗಳಾದ ಸಂತಾನಲಾಭ ಮತ್ತು ಪರಸ್ಪರ ಸಹಾಯ ಈಡೇರದ ಪಕ್ಷದಲ್ಲಿ ಸಮಾಜದ ಹಿರಿಯರು ವಿಚ್ಛೇದನಕ್ಕೆ ಕಾರಣಗಳನ್ನು ವಿಚಾರಿಸಿ ಅವು ಸಮಂಜಸವಾಗಿವೆಯೆಂದು ದೃಢವಾದ ಮೇಲೆ ಗೊತ್ತಾದ ಕ್ರಮದಂತೆ ವಿವಾಹ ವಿಚ್ಛೇದನಕ್ಕೆ ಅನುಮತಿ ಕೊಡುವರು ಎಂಬ ವಿಚಾರವಾಗಿ ಪ್ರಾಚೀನ ಉದಾಹರಣೆಗಳನ್ನು ಕಸ್ತೂರಿ ನೀಡಿದ್ದಾರೆ. ಧರ್ಮಶಾಸ್ತ್ರಗಳು ಪುರುಷನ ಪರವಾಗಿಯೇ ಮಾರ್ಪಾಡು ಹೊಂದಿದುವೆಂದೂ, ಪರಲೋಕದಲ್ಲಿ ಪುರುಷನ ಸುಖಕ್ಕಾಗಿ ಅವನ ಪತ್ನಿ 'ಸಹಗಮನ' ಮಾಡಬೇಕಾಯಿತು ಎಂದು ಅನೇಕರು ವ್ಯಾಖ್ಯಾನಿಸಿದ್ದಾರೆ. ಆದರೆ ಸಹಗಮನ ಪದ್ದತಿಗೆ ಬೇರೆ ವಿಧವಾದ ನಂಬಿಕೆಗಳೂ ಕಾರಣವಾಗಿದ್ದಿರಬಹುದು. ಉತ್ತರ ಅಮೆರಿಕಾದಲ್ಲಿದ್ದ ನಾಚೆಸ್ ಎಂಬ ಒಂದು ಬುಡಕಟ್ಟಿನವರು ಹೆಂಡತಿ ತೀರಿ ಹೋದರೆ, ಗಂಡನನ್ನು ಅವಳೊಂದಿಗೆ ಜೀವಸಹಿತ ಹೂಳುತ್ತಿದ್ದರು. ಇದಕ್ಕೆ ಪ್ರೇತ ಭಯವೇ ಮುಖ್ಯ ಕಾರಣ. ಅಣ್ಣನ ವಿಧವೆಯನ್ನು ತಮ್ಮನು ಮದುವೆ ಮಾಡಿಕೊಳ್ಳಬೇಕೆಂಬ ನಿರ್ಬಂಧವು ಹಿಂದೆ ಸರ್ವಸಾಮಾನ್ಯವಾಗಿತ್ತು ಆಕೆಯಲ್ಲಿ ಅಣ್ಣನಿಗೆ ಸಂತಾನವಾಗದಿದ್ದರೆ, ತಮ್ಮನನ್ನು ವಿವಾಹವಾದ ನಂತರ ಅವಳಿಗಾಗುವ ಮಕ್ಕಳನ್ನು ಅಣ್ಣನವೆಂದೇ ಭಾವಿಸುತ್ತಿದ್ದರು. ತಮ್ಮನಿಲ್ಲದಿದ್ದರೆ, ಗಂಡನ ಅಣ್ಣನೋ ಇತರ ನಂಟರೋ ಅವಳನ್ನು ವರಿಸಬಹುದು. ಹಾಗೆಯೇ ಅಕ್ಕನು ತೀರಿಹೋದರೆ ತಂಗಿಯನ್ನು ಮದುವೆ ಆಗುವ ಸಂಪ್ರದಾಯ ಅನೇಕ ದೇಶಗಳಲ್ಲಿದೆ. ಎರಡನೆಯ ಮದುವೆ ಅಥವಾ ಕೂಡುವಳಿಗೆ (ಕೂಡಿಕೆಗೆ) ಮೊದಲನೆಯದರಷ್ಟು 'ಶಾಸ್ತ್ರ'ಗಳನ್ನು ಪ್ರಾಕ್ತನ ಸಮಾಜಗಳು ವಿಧಿಸಿಲ್ಲ. ವಿಧವೆಯನ್ನು ಅಥವಾ ಗಂಡಬಿಟ್ಟವಳನ್ನು ಗಂಡನ ಮನೆತನದವರಾಗಲಿ ಬೇರೆಯವರಾಗಲಿ ವರಿಸಿದರೆ ಅದಕ್ಕೆ ಕೂಡುವಳಿ ಎಂದು ಹೆಸರು ಎಂಬುದನ್ನು ಕಸ್ತೂರಿಯವರು ವಿವರಿಸಿದ್ದಾರೆ.

"ಪುಸ್ತಕದ ಹೆಚ್ಚು ಭಾಗವು ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಶ್ರೀರಂಗಪಟ್ಟಣಗಳಲ್ಲಿ ಮದುವೆಯ ವಿಚಾರವಾಗಿ ನಾನು ಕೊಟ್ಟ ಭಾಷಣಗಳಿಂದ ರೂಪುಗೊಂಡಿತು' ಎಂದು ಕೃತಿಯ ರಚನೆಗೆ ಕಾರಣವಾದ ಅಂಶಗಳನ್ನು ತಿಳಿಸಿದ್ದಾರೆ."[4]

**ಕೊನೆಟಿಪ್ಪಣಿಗಳು**

1. ಮದುವೆ, ನಾ.ಕಸ್ತೂರಿ: ಮೈಸೂರು ವಿಶ್ವವಿದ್ಯಾನಿಲಯ, 1948, ಪು.01 (ಪೀಠಿಕೆಯಿಂದ)
2. ಅದೇ ಪುಟ–1
3. ಮದುವೆ, ನಾ.ಕಸ್ತೂರಿ: ಮೈಸೂರು ವಿಶ್ವವಿದ್ಯಾನಿಲಯ, 1948, ಪು.11
4. ಮದುವೆ, ನಾ.ಕಸ್ತೂರಿ: ಮೈಸೂರು ವಿಶ್ವವಿದ್ಯಾನಿಲಯ, 1948, ಪು.02